The Mysore Excise (Amendment) Bill, 1951.

Motion to consider.

The Hon'ble Sri H. SIDDAIYA (Minister for Revenue and Excise).—Sir, I beg to move:

"That the Mysore Excise (Amendment,) Bill, 1951, be taken into consideration."

No doubt the Bill is a very simple one but it involves a question of law for the simple reason that the wording of section 13-A of the Mysore Excise Act as it now stands is not very clear and is capable of various interpretations. To be free from doubt, this amendment is sought for. As a matter of fact, in a certain case brought before a magistrate, a doubt was felt and the accused was acquitted, the Magistrate relying on the decisions of the other High Courts such as Bombay and Patna. The present section as it stands does not refer to the public but refers to a person. The actual wording of the judgment of the Bombay High Court in 41 Criminal Law Journal which was also followed by a Full Bench of the Patna High Court in 46 Criminal Law Journal is very clear.

It is made very clear in the course of the judgment. The Chief Judge has interpreted the expression, "by any person or class of persons" to mean a person designated by name or by description or a class of persons designated, but not as including the public generally and that as pointed out if the intention of legislation was that prohibition should be extended to the public generally, it would have been so stated in clear language. The Magistrate relying upon these two decisions has acquitted the accused in this case. It is necessary in the interest of justice that this amendment is accepted. So, this Bill may be accepted.

Mr. SPEAKER.—The question is:

"That the Mysore Excise (Amendment) Bill, 1951, be taken into consideration."

The motion was adopted.

Mr. SPEAKER.—The clauses of the Bill will now be submitted to the Assembly. Clauses 2 and 3, both inclusive.

The question is:

"That Clauses 2 and 3, both inclusive, stand part of the Bill."

The motion was adopted.

Clauses 2 and 3, both inclusive, were added to the Bill.

Mr. SPEAKER.—Clause 1.

The question is:

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble.

The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri H. SIDDAIYA.—Sir, I beg to move:

"That the Mysore Excise (Amendment) Bill, 1951, be passed."

Mr. SPEAKER.—The question is:

"That the Mysore Excise (Amendment) Bill, 1951, be passed."

The motion was adopted.

The Mysore Restriction of Meetings near the Legislative Assembly Bill, 1951.

Motion to consider.

The Hon'ble Sri K. T. BHASHYAM.—(Minister for Law and Labour).—Sir, I beg to move:

"That the Mysore Restriction of Meetings near the Legislative Assembly Bill, 1951, be taken into consideration."

This Bill is somewhat important because the State Legislative Assembly is the supreme legislative body in the State and it has to work in an atmosphere of silence and undisturbed concentration on the work that they are called upon to undertake. It generally

happens sometimes that people who have got representation to make consider it a very appropriate time when members come from all parts of the State, to press their demands by holding meetings or carrying processions which necessarily will disturb the deliberations of the House. That is on the practical point of view the need for this Bill.

But there is an other point of view also, namely, the dignity of this House. This will have to be free from all disturbances and it must be held in great esteem and respect by the people. If they want to make any representations, they can at all times approach the Government and if they have got permission, they can hold meetings wherever they like. Hon'ble Members will find under clause 2:

"Provided that nothing in this section shall apply to any meeting, assembly or procession convened or held with the previous permission of the State Government."

So any citizen who wants to make a representation in a legitimate manner may get permission and do so. It is only in order to avoid any unsocial elements disturbing the deliberations of this House that this Bill has been brought forward. The Rajpramukh sometimes addresses the Assembly and it would be embarrassing indeed if there is any clamour on the part of the unsocial elements in the society disturbing the proceedings.

Sir, I invite the attention of the Hon'ble Members that there is a similar procedure existing in the House of Parliament. I believe that within about half a mile distance, no meeting or procession is allowed except with the permission of the Government. It is certainly a privilege on the part of every member of the Assembly to be able to pay undisturbed attention to his work. I therefore consider that Hon'ble Members will agree with the general principles of this Bill and give their hearty support.

Mr. SPEAKER.—Motion moved:—

"That the Mysore Restriction of Meetings near the Legislative Assembly Bill, 1951, be taken into consideration."

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಮಸೂದಾಕಾನೂನನ್ನು ನಾನು ತುಂಬಾ ಆದರದಿಂದ ಸ್ವಾಗತಿಸುತ್ತೇನೆ.—ಇದರ ಉದ್ದೇಶವನ್ನು ವಿವರಿಸುತ್ತಾ, ಈ ಸಭೆಯ ಗೌರವ ಪ್ರತಿಷ್ಠೆಗಳನ್ನು ಕಾಪಾಡುವುಕ್ಕಾಗಿ ಮತ್ತು ಯಾವ ಕೆಲಸಕ್ಕಾಗಿ ನಾವು ನಿಯುಕ್ತರಾಗಿ ಇಲ್ಲಿ ಸೇರಿರುತ್ತೇವೆಯೋ ಆ ಕೆಲಸವನ್ನು ಯಾವ ಅಡ್ಡಿ ಆತಂಕಗಳಿಲ್ಲದೆ ನೆರವೇರಿಸುವ ಉದ್ದಿಶ್ಯದಿಂದ ಈ ಕಾನೂನನ್ನು ತಂದಿರುವುದಾಗಿ ಮಾನ್ಯ ಸಚಿವರು ತಿಳಿಸಿರುತ್ತಾರೆ. ಇದರಿಂದ ಯಾವ ವ್ಯಕ್ತಿಯ ಮೂಲಭೂತ ಹಕ್ಕುಗಳಿಗೂ ಕೂಡ ಬಾಧಕವಾಗುವುದಿಲ್ಲ. ಯಾವುದಾದರೊಂದು ಸಭೆ ಸೇರಬೇಕಾದರೆ ಅಥವಾ ಒಂದು ನಿಯೋಗ ಮಂತ್ರಿಮಂಡಳವನ್ನಾಗಲೀ ಮಾನ್ಯ ಸದಸ್ಯರನ್ನಾಗಲಿ, ಭೇಟಿಮಾಡುವ ಉದ್ದೇಶದಿಂದ ಬರುವುದಾದರೆ, ಅವರು ತತ್ಪೂರ್ವವಾಗಿ ಸರ್ಕಾರದವರ ಅಪ್ಪಣೆಯನ್ನು ಪಡೆದು ಬರುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ಅದಕ್ಕೆ ಅವಕಾಶವನ್ನೂ ಕಲ್ಪಿಸಿದೆ. ಏನಿದ್ದರೂ, ಈ ರೀತಿಯಾಗಿ ಮಸೂದಾಕಾನೂನಿನಲ್ಲಿ ಒಳಗೊಂಡಿರುವ ಒಂದು ನಿರ್ಬಂಧವಿರುವುದರಿಂದ ಯಾವಾಗಲಾದರೂ ಇಲ್ಲಿನ ಸಭೆಯು ನಡೆವಳಿಕೆಗಳನ್ನು ಅಡ್ಡಿಪಡಿಸುವುದಕ್ಕೆ ಯಾವುದಾದರೂ ಸಭೆಯು ಸೇರಿದರಾಗಲೀ ಅಥವಾ ಯಾವುದಾದರೊಂದು ಹೊಸ ರಾಜಕೀಯ ಪಕ್ಷ ದೇಶದಲ್ಲೊಂದು ಅಲ್ಲಕಲ್ಲೋಲ ಪರಿಸ್ಥಿತಿಯನ್ನು ಉಂಟುಮಾಡುವ ಒಂದೇ ಒಂದು ಉದ್ದೇಶದಿಂದ ಈ ಸಭೆಯ ನಡೆವಳಿಕೆಗಳಿಗೆ ಭಂಗತರುವುದಕ್ಕೆ ಪ್ರಯತ್ನ ಪಡುವುದಾದರೆ ಅದಕ್ಕೆ ಅವಕಾಶವಾಗದಿರಲೆಂದು ಈ ಕಾನೂನನ್ನು ತಂದಿದ್ದಾರೆ. ಇದು ಬಹಳ ಅಗತ್ಯವಾಗಿದೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪಿಗೆ ಕೊಡುತ್ತಾರೆಂದು ನಂಬಿದ್ದೇನೆ.

Janab MOHAMED HANIEF (Bangalore—Muslim).—Sir, with great respect I beg to differ. Those who get up demonstrations do so not because they intend any indignity to anybody. They do so out of a sincere conviction that their cause is just. Demonstrations at the time when the Assembly is in session or when the Rajpramukh is addressing the Assembly, or for that matter, when any important personality visits Bangalore and addresses a meeting are the order of the day. If, at that time, a demonstration is conducted in an orderly manner, giving expression to its conviction with a view to bring their point of view to the attention of the House or of the Rajpramukh or of the gentleman, it cannot be said to be that that act of demonstration is calculated to bring down the dignity of the House or of the Rajpramukh or of that gentleman who addresses the meeting. It is out of a sincere desire to get redress that they come forward and demonstrate. With respect, I feel that I cannot agree to the proposition that it is necesary to

(JANAB MOHAMED HANIEF.)

put restriction on demonstration because such demonstrations would be derogatory to the dignity of the House or of the Rajpramukh or of the gentleman concerned. Calm, collected, cool atmosphere to be obtained for the deliberation of this House is another reason put forward. Sir, that again is not a good reason to put a fetter on demonstrations when the House is in session or when the Rajpramukh or a distinguished gentleman addresses meeting. If a demonstration of those who have a grievance to explain is held or the demonstrators feel that the best way of ventilating and giving expression to their grievances would be by a meeting, why should it be fettered? If that is so, how can it be said that it acts against the dignity of the House or of the Rajpramukh or the gentleman whoever it may be? Sir, it is certainly a handicap and is calculated to suppress the feelings of the people who feel that the only way of getting justice or relief is to stage a demonstration. How can it be said that it is a measure calculated to bring the Assembly or the Rajpramukh or the Government into disrepute.

Sir, up till now there was no such legislation. People have not given any cause for such legislation. People could be left to themselves and appeal could be made to their good sense that they should be orderly in their methods of approach and I feel that the people are not so oblivious either of the dignity of the House or of the Rajpramukh or of any other person. And I am sure they will not misbehave, if their attention is drawn to that aspect of the case. But whatever the matter if the people feel strongly on any point, if they feel that the Government is not acting according to their wishes, it is their right to get up a demonstration of whatever type whether near or far away from the Legislative Assembly Hall. From that point of view, I beg to differ in all respects from the point of view expressed by the Hon'ble Minister for Law and I oppose this legislation.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ಮನೂದೆಯನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ, ಇದನ್ನು ತರಬೇಕಾದರೆ ಉದ್ದೇಶ, ಮತ್ತು ಕಾರಣಗಳೇನೆಂಬ ಬಗ್ಗೆ ನ್ಯಾಯಾಂಗ ಸಚಿವರು ಯಾವುದಾದರೂ ಉದಾಹರಣೆ ಕೊಟ್ಟು ಇದನ್ನು ತರಲು ಅಗತ್ಯವಿದೆಯೆಂದು ಹೇಳಬಹುದಾಗಿತ್ತು. ಹಾಗೆ ಯಾವ ಕಾರಣವನ್ನೂ ಕೊಡದೆ ಎಕ್‌ದಮ್ ಇದನ್ನು ತಂದಿರುವುದು. ಅನೇಕ ಸಂಶಯಗಳಿಗೆ ಎಡೆ ಕೊಟ್ಟಿದೆ. ಸಾಮಾನ್ಯವಾಗಿ ಈ ಸಭೆಯ ಕಾರ್ಯಕಲಾಪಗಳು ನಡೆಯುವ ಕಾಲದಲ್ಲಿ ಸಭಾದಲ್ಲಿ ಯಾವುದಾದರೂ ಸಭೆ ನಡೆಸುವುದಕ್ಕಾಗಲೀ ಅಥವಾ ಭಾಷಣಮಾಡಬೇಕಾಗಲೀ, ಯಾವುದಾದರೂ ಪೆರವಣಿಗೆಯನ್ನು ತಂದ ಮಾತ್ರಕ್ಕೆ ಅದು ತಪ್ಪೆಂದು ಈ ಈ ಮನೂದೆಯನ್ನು ಏಕೆ ತಂದರೋ ಗೊತ್ತಿಲ್ಲ. ಹಾಗೆ ಯಾವುದಾದರೂ ಸಭೆ ಶಿಸ್ತಿಗೆ ವಿರುದ್ಧವಾಗಿ ಶಾಂತಿ ಭಂಗ ಮಾಡುವುದಕ್ಕೆ ಪ್ರಯತ್ನಮಾಡಿದರೆ ಆಗ ತಕ್ಕ ಕ್ರಮ ಕೈಗೊಳ್ಳಲು ನಮ್ಮ ಈಗಿರುವ ಕಾನೂನಿನಲ್ಲೇ ಬೇಕಾದಷ್ಟು ಅವಕಾಶವಿದೆ. ಕಾನೂನು ಪ್ರಕಾರ ಯಾವ ಕಾರ್ಯಕ್ರಮವನ್ನಾದರೂ ತೆಗೆದು ಕೊಳ್ಳಬಹುದು.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಹಾಗೆ ಕಾರ್ಯಕ್ರಮ ಕೈಗೊಳ್ಳಲು ಯಾವ ಕಾನೂನಿನಲ್ಲಿ ಅವಕಾಶವಿದೆ?

ಶ್ರೀ ಬಿ. ಹುಚ್ಚೇಗೌಡರು.—ಪೋಲೀಸ್ ಆಕ್ಟಿನಲ್ಲಿದೆ, ಕ್ರಿಮಿನರ್ ಪ್ರೊಸೀಜರ್ ಕೋಡಿನಲ್ಲಿದೆ. ಅದರ ಪ್ರಕಾರವೂ ಆಗದಂತೆ ಶಿಸ್ತು ತಪ್ಪಿ ಶಾಂತಿ ಭಂಗಮಾಡುವುದಕ್ಕೆ ಯಾರಾದರೂ ಪ್ರಯತ್ನಪಟ್ಟಾಗ ಇಂತಹ ಮನೂದೆ ತರಬಹುದಾಗಿತ್ತು. ಅಂತಹ ಯಾವುದಾದರೂ ಉದಾಹರಣೆಯಿದ್ದಿದ್ದರೆ ನ್ಯಾಯಾಂಗ ಸಚಿವರು ಹೇಳಬಹುದಾಗಿತ್ತು. ದೇಶದ ಆಗುಹೋಗುಗಳಿಗೆ ಸಂಪೂರ್ಣ ಜವಾಬ್ದಾರಿ ಮತ್ತು ಪರಮಾಧಿಕಾರವಿರುವ ಈ ಸಭೆಗೆ ಯಾರಾದರೂ ಒಂದು ದೂರು ಕೊಡಬೇಕು, ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬೇಕು ಎಂದು ಒಂದು ಅರ್ಜಿ ಕೊಡುವುದಕ್ಕೂ ಅವಕಾಶವಿಲ್ಲವೆಂದರೆ ಇದೆಂತಹ ಶೋಚನೀಯ ಸಂಗತಿ! ಈ ಸಭೆಯ ಘನತೆ ಗೌರವಗಳನ್ನು ಕಾಪಾಡಬೇಕೆಂದು ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ನಾವು ದೇಶದ ಪ್ರಜೆಗಳ ವಿಶ್ವಾಸವನ್ನೂ ಪ್ರೀತಿಯನ್ನೂ ಗಳಿಸಿದರೆ ಘನತೆ ಗೌರವ ದೊರೆಯುತ್ತದೆಯೇ ಹೊರತು ಬರಿಯ ಕಾನೂನಿನಿಂದ, ಸಭೆಯ ನುತ್ತಲೂ ಪೋಲೀಸ್ ಕಾವಲಿಟ್ಟುಕೊಳ್ಳುವುದರಿಂದ ಘನತೆಗೌರವ ಬರುವುದಿಲ್ಲ. ನಾವು ದೇಶದ ಪ್ರಜೆಗಳ ಸುಖಕ್ಕಾಗಿ ದುಡಿಯುತ್ತಿದ್ದೇವೆ. ಅವರ ಸಂಕಟಗಳನ್ನು ನೀಗುವುದಕ್ಕಾಗಿ ಆಡಳಿತ ನಡೆಸುತ್ತಿದ್ದೇವೆಂದು ಪ್ರಜೆಗಳಿಗೆ ಮನವರಿಕೆಯಾದರೆ ಅವರು ನಮ್ಮಲ್ಲಿ ಹೆಚ್ಚು ಗೌರವ ತೋರಿಸುತ್ತಾರೆ. ಅದನ್ನು ಬಿಟ್ಟು ನಾವು ಅಡ್ಡದಾರಿ ಹಿಡಿದು ಇಂತಹ ಕಾನೂನುಗಳಿಂದ ಗೌರವ ಉಳಿಸಿಕೊಳ್ಳಬೇಕೆಂದರೆ ಅದು ಬಹುಕಾಲ ಉಳಿಯುವುದಿಲ್ಲ.

ಇನ್ನೊಂದು ವಿಷಯವನ್ನು ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ಹೊಸ ರಾಜಕೀಯ ಪಕ್ಷ ಬಂದರೆ ಈ ರೀತಿ ಈ ಸಭೆಯ ಹೊರಗೆ ಗಲಾಟೆ ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳಿದರು. ಹಾಗಾದರೆ ಅವರ ಅಭಿಪ್ರಾಯದಲ್ಲಿ ಬೇರೆ ಯಾವ ರಾಕೀಯ ಪಕ್ಷವೂ ಸ್ಥಾಪನೆಯಾಗಬಾರದು, ಏಕನಾಯಕ ಪಕ್ಷ ಒಂದೇ ಇರಬೇಕು ಎಂದಿರುವಂತೆ ಕಾಣುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ನಮ್ಮನೆ ಅಲ್ಲ ಕಲ್ಲೋಲ ಪರಿಸ್ಥಿತಿಯನ್ನುಂಟುಮಾಡುವ ದುರುದ್ದೇಶ

ದಿಂದ ಯಾರಾದರೂ ಬಂದರೆ ಅದನ್ನು ತಡೆಗಟ್ಟಲು ಇಂತಹ ಕಾನೂನು ಅಗತ್ಯ.

ಶ್ರೀ ಬಿ. ಹುಚ್ಚೇಗೌಡರು.—ಜನರಿಗೆ ಯಾವುದಾದರೂ ಕುಂದು ಕೊರತೆ, ಬಂದಾಗ ಸರ್ಕಾರದಲ್ಲಿಯೂ ಅಧಿಕಾರಿಗಳಲ್ಲಿಯೂ ನ್ಯಾಯ ಸಿಕ್ಕದೇ ಹೋದಾಗ ಅವರು ಯಾವ ರೀತಿಯಲ್ಲಾದರೂ ಸೂಕ್ತ ಪರಿಹಾರ ಪಡೆಯಬೇಕಾದರೆ ಅವರಿಗೆ ಅವಕಾಶವಿರಬೇಕು. ಇದಕ್ಕೆ ಅನುಕೂಲವಾಗಿ ಅವರಿಗೆ ಈ ಸಭೆ ಒಂದು ಇದೆ. ಈ ಸಭೆಯ ಅಧ್ಯಕ್ಷರಿಗೆ ಅರ್ಜಿ ಕೊಡುವ ಅವಕಾಶವೂ ಅವರಿಗಿದೆಯೆಂದು ನನ್ನ ಭಾವನೆ. ಇದನ್ನೇಕೆ ತಪ್ಪಿಸುವುದು?

ಅಧ್ಯಕ್ಷರು.—ಇದರಿಂದ ಅದು ತಪ್ಪುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈ ಮಸೂದೆಯಲ್ಲಿ ಈ ರೀತಿ ಇದೆ.—

" . . . give any notice for convening or take part in any meeting, assembly or procession consisting of fifty or more persons in any street, square or open place, within a distance of half a mile from the place of meeting of the State Legislative Assembly for the purpose or on the pretext of considering, preparing or submitting any petition, complaint . . . . . "

ಅಧ್ಯಕ್ಷರು.—ಈ ಸಭೆಗೆ ಅರ್ಜಿ ಹೇಗೆ ಕೊಡಬೇಕೆಂಬುದು ನಿಬಂಧನೆಗಳಲ್ಲ ನಮೂದಾಗಿದೆಯೋ ಅದರಂತೆ ಕೊಡಲು ಅಭ್ಯಂತರವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಯಾವ ರೀತಿಯಲ್ಲಾದರೂ ಈಗಿನ ಸರ್ಕಾರದವರಿಗೆ ತೊಂದರೆ ಬರತಕ್ಕ ಪ್ರಚಾರವನ್ನು ನಿಷಿಸುವುದಕ್ಕೆ ಸಾಧ್ಯವಿಲ್ಲದೆ ಇರಲಿ ಎಂಬ ಉದ್ದೇಶದಿಂದ ಈ ಮಸೂದೆಯನ್ನು ತಂದಿರುವಂತೆ ಕಾಣುತ್ತದೆ. ನಿಜವಾದ ಪ್ರಜಾಸರ್ಕಾರವಾದರೆ ಇಂತಹ ಸಭೆಗಳ ಟೀಕೆಗಳನ್ನು ಸ್ವಾಗತಿಸಬೇಕು, ತಮ್ಮ ತಪ್ಪನ್ನು ತಿಳಿದುಕೊಳ್ಳುವುದಕ್ಕೆ ಯಾವ ಒಂದು ಪಕ್ಷವಾದರೂ ಸಭೆಯಲ್ಲಿ ಆಡಳಿತವನ್ನು ಟೀಕಿಸುವುದನ್ನು ಸ್ವಾಗತಿಸಬೇಕು.

ಈ ಮಸೂದೆಯನ್ನು ತಂದ ಮೇಲೆ ಪರಿಷ್ಕಾರವಾಗಿ ದೇಶದಲ್ಲಿ ತಮಗೆ ಯಾವುದೊಂದೂ ವಿರೋಧವಾರದು, ತಾವು ಎಷ್ಟೇ ದಬ್ಬಾಳಿಕೆಯಿಂದ ನಡೆದಾಗ್ಯೂ ತಮ್ಮನ್ನು ಯಾರೂ ಕೇಳಬಾರದು ಎಂಬೀ ಅಭಿಪ್ರಾಯುಗಳಿಗಾಗಿ 50 ಜನರು ಸೇರಿ ಎಲ್ಲಾದರೂ ಚಳವಳಿ ಹೂಡುವ ಅವಕಾಶವಿದ್ದಲ್ಲಿ ಅವರನ್ನು ಮಟ್ಟಾಹಾಕ ಬೇಕೆಂಬ ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ. ಇಂಥಾ ಕಾರ್ಯಕ್ರಮಗಳಿಂದ ಸರ್ಕಾರಕ್ಕೆ ಖಂಡಿತ ಒಳ್ಳೆಯ ಹೆಸರು ಬರುವುದಿಲ್ಲ. ಅಷ್ಟೇ ಅಲ್ಲದೆ, ಈ ಸಭೆಯ ಘನತೆ ಗೌರವಗಳೂ ಕೂಡ ಉಳಿಯುವುದಿಲ್ಲ. ದೇಶದಲ್ಲಿರುವ ಜನತೆಯ ಮತ್ತು ಈ ಮಾನ್ಯ ಸಭೆಯ ಘನತೆ ಗೌರವಗಳನ್ನೇ ಕಾಪಾಡತಕ್ಕ ದೃಷ್ಟಿಯಿಂದ ನಾನು ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಎಂ. ಎಸ್. ಜೋಯಿಸರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಸರ್ಕಾರದ ದಬ್ಬಾಳಿಕೆ ಮತ್ತು ಅಪಪ್ರಚಾರಕ್ಕೆ ಅಡ್ಡಿ ಆತಂಕಗಳನ್ನು ತರುವುದನ್ನು ತಡೆಗಟ್ಟುವ ಉದ್ದೇಶದಿಂದ ತಂದಿರುವ ಈ ಮಸೂದೆಯನ್ನು ವಿರೋಧಿಸುತ್ತೇನೆಂದು ಈಗಾಗಲೇ ಇದನ್ನು ವಿರೋಧಿಸಿರುವ ಮಾನ್ಯ ಸದಸ್ಯರು ಹೇಳಿದರು. ಆದರೆ ಅವರು ಭಾವಿಸಿರೋ ಹಾಗೆ ಈ ಮಸೂದೆಯಲ್ಲ ತೊಂದರೆ ಕೊಡತಕ್ಕಂಥ ಅವಕಾಶವೇ ಇಲ್ಲ. ಈ ಬಿಲ್ಲಿನಲ್ಲಿ ತಿಳಿಸಿರುವುದು ಅಧಿವೇಶನ ನಡೆಯತಕ್ಕ ಕಾಲದಲ್ಲಿ ಅಧಿವೇಶನದ ಸುತ್ತ ಮುತ್ತಲೂ ಇರುವ ಅರ್ಧ ಮೈಲಿ ಘಾನಲೆಯೊಳಗೆ ಯಾರೂ ಸಭೆ, ಮೆರವಣಿಗೆ ಪಗ್ಯೆರೆ ಮಾಡಬಾರದೆಂದು ಹೇಳಲಾಗಿದೆ. ಹಾಗೆ ಅಸೆಂಬ್ಲಿ ನಡೆಯುತ್ತಿರುವಾಗ ಅರ್ಧ ಮೈಲಿಯ ಆಚೆಗೂ ಎಂದು ತಿಳಿಸಿದ್ದರೆ ಆಗ ಇವರು ಹೇಳತಕ್ಕ ವಾದಕ್ಕೆ ಅವಕಾಶ ಇರುತ್ತಿತ್ತು. ಈಗ ಆ ರೀತಿಯೇನೂ ಹೇಳದೆ ಇರುವುದರಿಂದ ಯಾವ ರೀತಿಯಿಂದಲೂ ಪ್ರಚಾರಕ್ಕೆ ಅನಾನುಕೂಲವುಂಟಾಗಿರುವುದಿಲ್ಲ. ಈ ಮಸೂದೆಯಿಂದ ಪ್ರಜೆಗಳಿಗೆ ಅರ್ಜಿವಗ್ಯೆರೆಗಳನ್ನೂ ಕೂಡ ಕೊಡಲಿಕ್ಕೆ ಅವಕಾಶವಿಲ್ಲದಂತಾಗುತ್ತದೆಂದು ಒಂದು ಮಾತು ಹೇಳಿದರು. ಈಗಿರತಕ್ಕ ಪ್ರಜಾಪ್ರಭುತ್ವದ ಕಾಲದಲ್ಲಿ ಅರ್ಜಿ ವಗ್ಯೆರೆಗಳನ್ನು ಕೊಡಲಿಕ್ಕೂ ಸಹ ಅದಕ್ಕೆ ಅನುಸರಿಸಬೇಕಾದ ನಿಯಮಗಳಿರುವುದರಿಂದ ಅದರ ಬಗ್ಯೆ ಸಹ ಯಾವ ಅಡ್ಡಿ ಆಡಚಣೆಗಳೂ ಇರುವುದಿಲ್ಲ. ಆಥವಾ ಒಂದು ವೇಳೆ ಯಾರಾದರೂ ಬಂದು ಈ ಸಭೆಯ ಮಾನ್ಯ ಸದಸ್ಯರುಗಳಿಗೆ ಯಾವುದಾದರೂ ವಿಷಯವಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಲಿಕ್ಕೆ ಮತ್ತೂ ಮಾನ್ಯ ಸದಸ್ಯರೊಡನೆ ಆ ಬಗ್ಯೆ ಚರ್ಚೆ ನಡೆಸಲಿಕ್ಕೆ ಈಗಲೂ ಅವಕಾಶವಿದ್ದೇ ಇದೆ. ಈ ಭಾಗದಲ್ಲೆನಾದರೂ ತೊಂದರೆಯಿದೆಯೇ ಎಂದು ನೋಡಿದರೆ ಅಂಥ ಯಾವ ತೊಂದರೆಯೂ ಇಲ್ಲ. ಆದುದರಿಂದ ಈಗ ಸಭೆಯ ಮುಂದೆ ಬಂದಿರುವ ಮಸೂದೆಯು ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿಯೇ ಇದೆ. ಪ್ರಜೆಗಳು ಪ್ರತಿನಿಧಿಗಳ ಬಳಿಗೆ ಬರಬೇಕು. ಪ್ರತಿಯೊಂದು ವಿಚಾರವನ್ನು ಚರ್ಚೆ ಮಾಡಬೇಕು, ಆದರಂತೆ ಇಲ್ಲಿ ಮಾನ್ಯ ಸದಸ್ಯರು ಸಾರ್ವಜನಿಕರ ಅಭಿಪ್ರಾಯವನ್ನು ಪ್ರತಿಬಿಂಬಿಸಬೇಕು, ಹೀಗೆ ಇಲ್ಲಿ ಮಾನ್ಯ ಸದಸ್ಯರು ಪ್ರತಿಬಿಂಬಿಸುವ ಅಭಿಪ್ರಾಯವನ್ನೇ ದೇಶದ ಪ್ರಜೆಗಳಿಗೆ ಅವರು ಹೋಗಿ ತಿಳಿಸಬೇಕು ಎಂಬುದೇ ಪ್ರಜಾಪ್ರಭುತ್ವ ಸರ್ಕಾರದ ರೀತಿ ಮತ್ತು ನೀತಿ. ಇದೇ ಅದರ ಲಕ್ಷಣಗಳು. ಅಂದ ಮೇಲೆ ದೇಶದಲ್ಲಿರತಕ್ಕ ಪ್ರಜೆಗಳ ಹೈಕೆ ಅಲ್ಲಲ್ಲಿಯ ಜನರ ಅಭಿಪ್ರಾಯಗಳೇನಿರುತ್ತೆಂಬುದನ್ನೆಲ್ಲಾ ಕ್ರೋಢೀಕರಿಸಿಕೊಂಡು ಯಾರೇ ಆಗಲಿ ಒಟ್ಟಿಗೆ 49 ಜನಗಳವರೆಗೆ ಬಂದು ಈ ಸಭೆಯ ಸದಸ್ಯರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಬಹುದು. ಅದಕ್ಕೂ ಸಹ ಯಾವ ತೊಂದರೆಯೂ ಇಲ್ಲ. ಹೀಗೆ ಬರುವಂಥ 49 ಜನರು ಯಾವ ಪಾರ್ಟಿ ಪಕ್ಷಕ್ಕೇ ಸೇರಿರಲಿ, ಅಥವಾ ವಿರೋಧ ಪಕ್ಷದವರೇ ಆಗಿರಲಿ ಅದಕ್ಕೂ ಕೂಡ ಅವಕಾಶವಿದೆ. ಆದರೆ ದೇಶದಲ್ಲಿ ಅವರ ಪಕ್ಷದ ಬೆಂಬಲ 5000 ಇರಬಹುದು, ಇಲ್ಲವೇ 50,000, 500,000 ಇರಬಹುದು. ಆಥರೆ ಅವರೆಲ್ಲರ ಅಭಿಪ್ರಾಯಗಳನ್ನು ಬೇರೆ ಕಡೆಯಲ್ಲಿ ಚರ್ಚೆ ಮಾಡಿ ಅವರೆಲ್ಲರೂ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬಂದನಂತರ ಅಂಥಾ ಪಕ್ಷಗಳ ಮುಖಂಡರುಗಳಾಗಿರತಕ್ಕ ಕೆಲವು ಮಂದಿ ಬಂದು ಇಲ್ಲಿ ತಮ್ಮ ಅಭಿಪ್ರಾಯಗಳನ್ನು ಸದಸ್ಯರೊಂದಿಗೆ ತಿಳಿಸಿ, ಅವರು ಚರ್ಚೆ ನಡೆಸಬಹುದು. ಅದಕ್ಕೂ ಕೂಡ ಯಾವ ಅಡ್ಡಿ ಆಡಚಣೆಗಳೂ ಇಲ್ಲ. ಹಾಗಲ್ಲದೆ ಆ 5,000 ಜನರೆಲ್ಲರೂ ಒಟ್ಟಾಗಿಯೇ ಇಲ್ಲಿಗೆ ಬಂದು ಇಲ್ಲಿರುವ ಸದಸ್ಯರೊಂದಿಗೆ ಮಾತನಾಡಬೇಕಾದ ಪ್ರಮೇಯವಿಲ್ಲ. ಅವರು ಎಲ್ಲವನ್ನೂ ಚರ್ಚೆ ಮಾಡಿ, ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬಂದು ಅದರಂತೆ ನೋಟಿಸ್ ಕೊಡಲು ಅವರ ಪಕ್ಷದ ಒಬ್ಬಿಬ್ಬ ಮುಖಂಡರುಗಳನ್ನು ಕಳುಹಿಸಿಕೊಟ್ಟರೆ ಸಾಕಾಗಿದೆ. ಅವರೆಲ್ಲರೂ ಬರಲೇಬೇಕಾದ್ದಿಲ್ಲ. ಹೀಗೆ ಮಾಡಿದರೆ ಈ ಸಭೆಯ ಘನತೆ, ಗೌರವಗಳು ಏನೂ ಕಮ್ಮಿಯಾಗುವುದಿಲ್ಲ. ಹಾಗೆ ವಿನಯದಿಂದ

(ಶ್ರೀ ಎಂ. ಎಚ್. ಜೋಯಿಸರು.)

ವರ್ತಿಸುವ ಜನರಿಗೂ ಸಹ ಏನೂ ಘನತೆ ಗೌರವಗಳು ತಗ್ಗುವುದಿಲ್ಲ. ಈ ತೆರನಾದ ಶಿಸ್ತು ಇರಬೇಕೆಂಬ ಉದ್ದೇಶದಿಂದಲೇ ಪ್ರಜಾಪ್ರಭುತ್ವ ಜಾರಿಗೆ ಬಂದ ಮೇಲೆ ಕೆಲವು ಹೊಸ ಪದ್ಧತಿಗಳನ್ನು ಜಾರಿಗೆ ತರ ಬೇಕಾಗಿರುವ ಉದ್ದೇಶದಿಂದ ಹೊಸ ಹೊಸ ಕಾನೂನು ಗಳು ಬರುತ್ತಿವೆ. ಆದರೆ ಇಂಥಾ ಪ್ರಜಾಪ್ರಭುತ್ವ ತತ್ವಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಕೆಲವು ಜನರುಗಳ ಗುಂಪು ಇಂಥಾ ಹೊಸ ಹೊಸ ಕಾನೂನು ಗಳನ್ನು ನೋಡಿ ಅಂಜಿಕೊಳ್ಳಬಹುದು. ಆದರೆ ಮಾನ್ಯ ಸದಸ್ಯರು ಆಂಥಾ ಅಂಜುಬುರುಕರ ಗುಂಪಿಗೆ ಸೇರ ಬೇಕಾದ್ದಿಲ್ಲ ಮತ್ತು ಸೇರಬಾರದೆಂದೂ ಹೇಳುತ್ತೇನೆ. ಹೀಗೆ ಎಲ್ಲರಿಗೂ ಅವರವರ ಅಭಿಪ್ರಾಯಗಳನ್ನು ತಿಳಿಸ ಲಿಕ್ಕೆ ಸಾಕಷ್ಟು ಈ ಕಾನೂನು ಬಂದಾಗ್ಯೂ ಅವಕಾಶ ಇದ್ದೇ ಇದೆ. ಇಂಥಾ ಮಸೂದೆಗಳು ಪ್ರಜೆಗಳ ಶಿಸ್ತು, ರೀತಿನೀತಿಗಳಿಗೆಲ್ಲಾ ಸಹಾಯಕವಾಗುವಂತಿವೆ.

ಜನಾಬ್ ಹನೀಫ್‌ರವರು ವಾದ ಮಾಡುತ್ತ ಇದನ್ನು ಜನರಿಗೇ ಬಿಟ್ಟು ಬಿಡೋಣವೆಂಬುದಾಗಿ ತಿಳಿಸಿದರು. ಆದರೆ ಅವರಿಂದ ಇಂಥಾ ಒಂದು ವಾದ ಬರುತ್ತೆಂದು ನಾನು ಖಂಡಿತ ತಿಳಿದಿರಲಿಲ್ಲ. ಇವರನ್ನು ನಾನು ಬಹಳ ವರ್ಷಗಳಿಂದ ಬಲ್ಲೆ. ಇವರು ಯಾವಾಗಲೂ ಬಹಳ ವಿವೇಕಯುತವಾಗಿಯೂ ಮತ್ತು ವಿವೇಚನೆಯಿಂದಲೂ ಯಾವ ಒಂದು ವಿಚಾರದಲ್ಲೂ ತೀರ್ಮಾನಕ್ಕೆ ಬರುತ್ತಿದ್ದಂಥವರು. ಇವರು ಸಹ ಹೀಗೆ ಅಭಿಪ್ರಾಯಪಟ್ಟಿರುವುದು ಆಶ್ಚರ್ಯ! ಇಂಥಾ ಕಾನೂನಿಗೆ ವಿರೋಧವಾಗಿ ಹೋಗುವವರು ಕಡಿಮೆ, ತೊಂದರೆ ಮಾಡತಕ್ಕ ಜನರಿಗೆ ಶಿಕ್ಷೆ ಆಗೇ ಆಗುತ್ತೆ, ಅದಕ್ಕೆಲ್ಲಾ ಬೇಕಾದಷ್ಟು ಕಾನೂನುಗಳು ಈಗಾಗಲೆ ಇರುತ್ತವೆ ಎಂದು ತಿಳಿಸಿದರು. ಆದರೆ ಎಲ್ಲಾ ಜನರಿಗೂ ಕಾನೂನು ತಿಳಿದಿರುತ್ತೆಂದು ಹೇಳುವುದಕ್ಕಾಗುವುದಿಲ್ಲ. ಈ ಪ್ರಜಾಪ್ರಭುತ್ವದ ತಿರುಳನ್ನೇ ತಿಳಿಯದಿರತಕ್ಕವರು ವಿಶೇಷವಾಗಿದ್ದಾರೆ. ಕಾನೂನು ಮಾಡಿದರೇ ಜನರಿಗೆಲ್ಲ ತೊಂದರೆಯಾಗುವುದಿಲ್ಲ. ಯಾರೂ ಕಾನೂನಿಗೆ ವಿರೋಧವಾಗಿ ಹೋಗುವುದಿಲ್ಲ. ಅಪ್ಪಿತಪ್ಪಿ ನಡೆಯುವವರೆಲ್ಲ ತೀರ ವಿರಳ. ಅಂಥ ಅಲ್ಪಸ್ವಲ್ಪ ಜನರಿಗೆ ತೊಂದರೆಯಾಗಬಹುದು. ಬಹು ಜನಗಳ ಸೌಕರ್ಯಕ್ಕಾಗಿ ಕಾನೂನನ್ನು ರಚಿಸಿದಾಗ ಯಾರಾದರೂ ಅಲ್ಪಸಲ್ಪ ಜನರು ವಿರೋಧವಾಗಿ ನಡೆದರೆ ಅಂಥವರಿಗೆ ಶಿಕ್ಷೆಯಾಗುವುದಕ್ಕೆ ಯಾರದೂ ಅಭ್ಯಂತರವಿಲ್ಲ. ಅವರಿಂದ ಸಾರ್ವಜನಿಕರಿಗೇನೂ ತೊಂದರೆಯಾಗುವುದಿಲ್ಲ. ಅಂಥಾ ಸನ್ನಿವೇಶಗಳೆಲ್ಲವನ್ನೂ ಆಲೋಚನೆ ಮಾಡಿಯೇ ಈ ಕಾನೂನು ತಂದಿರುವುದು. ಆದ್ದರಿಂದ ಈ ಮಸೂದೆಯನ್ನು ಜಾರಿಗೆ ತಂದರೆ ಯಾರ ಹಕ್ಕು ಭಾಧ್ಯತೆಗಳಿಗೂ ಧಕ್ಕೆ ಬರುವುದಿಲ್ಲ ಮತ್ತು ಯಾರಿಗೂ ಹಾಗೆ ತೊಂದರೆಗಳು ಆಗುವುದಿಲ್ಲ. ಇಂಥಾ ಕಾನೂನುಗಳು ಎಲ್ಲಾ ದೇಶದಲ್ಲೂ ಜಾರಿಯಲ್ಲಿವೆ. ಅದರಂತೆ ಇಲ್ಲಿಯೂ ಈಗ ನಡೆಯಬೇಕಾಗಿದೆ. ಅಷ್ಟೇ ಶಿವಾಯಿ ಇದರಿಂದ ಯಾವ ನಮ್ಮ ವೈಶಿಷ್ಟ್ಯಗಳಿಗಾಗಲೀ, ಘನತೆ ಗೌರವ ಗಳಿಗಾಗಲೀ ಯಾವ ತೊಂದರೆಯೂ ಇಲ್ಲ. ಆದುದ ರಿಂದ ಇದಕ್ಕೆ ಎಲ್ಲರೂ ಒಪ್ಪಿಗೆಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯಪಿಲ್ಲೆ).— ಅಧ್ಯಕ್ಷರೇ ಕೆಲವು ಮಾನ್ಯ ಸದಸ್ಯರು ಈ ಮಸೂದೆಗೆ ತಮ್ಮ ವಿರೋಧಾಭಿಪ್ರಾಯವನ್ನು ಸೂಚಿಸಿದ್ದು ನನಗಂತೂ ಪೂರಾ ಆಶ್ಚರ್ಯವಾಗಿದೆ! ಶ್ರೀ ಬಿ. ಹುಚ್ಚೇಗೌಡರು ಮಾಡಿರತಕ್ಕ ಭಾಷಣವನ್ನು ನೋಡಿದರೆ ಮೈಸೂರು ದೇಶದಲ್ಲರುವ ವಿರೋಧ ಪಕ್ಷಗಳನ್ನೆಲ್ಲಾ ತುಳಿದು ಹಾಕಬೇಕೆಂಬ ಉದ್ದೇಶದಿಂದ ಈ ಕಾನೂನನ್ನು ತರಲಾಗಿದೆಯೆಂಬ ಧೋರಣೆಯಲ್ಲ ಅವರು ವಾದ ಮಾಡಿದಂತೆ ನನಗೆ ಭಾಸವಾಗುತ್ತದೆ. ಬಹುಶಃ ಅವರು ಈ ಕಾನೂನನ್ನು ಓದಿ ಅರ್ಥಮಾಡಿಕೊಳ್ಳು ವಾಗ ಈ ಕಾನೂನು ಮೈಸೂರು ಸಂಸ್ಥಾನದ ಎಲ್ಲಾ ಕಡೆಗೂ ಯಾವಾಗಲೂ ಆನ್ವಯಿಸುವುದೆಂಬ ಭ್ರಾಂತಿ ಯಿಂದ ಕೂಡಿದ್ದಾರೆಂದು ಕಾಣುತ್ತದೆ. ಈ ಸಭೆಯು ನಡೆಯುತ್ತಿರುವ ಕಾಲದಲ್ಲಿ, ಅಂದರೆ ಈ ಊರಿನಲ್ಲೇ ಆಗಲೀ ಅಥವಾ ಯಾವ ಊರಿನಲ್ಲಿಯೇ ಆಗಲೀ—ಏತ ಕ್ಕೆಂದರೆ ಕಾನೂನಿನಲ್ಲಿ 'it extends to whole of Mysore" ಎಂದು ಹೇಳಿದೆ— ಅಸೆಂಬ್ಲಿ ಯಾವ ಸ್ಥಳದಲ್ಲಿ ನಡೆದರೆ ಆ ಸ್ಥಳದಲ್ಲಿ, ಹಾಗೆ ಅಸೆಂಬ್ಲಿ ನಡೆಯುತ್ತಿರುವ ಕಾಲದಲ್ಲಿ ಎಂಬುದನ್ನೂ ಸಹ ಪರಿಷ್ಕಾರವಾಗಿಯೇ ತಿಳಿಸಿದೆ. ಇಷ್ಟೆಲ್ಲಾ ಇದ್ದಾಗ್ಯೂ ಅವರು ಏತಕ್ಕಾಗಿ ಹಾಗೆ ಅರ್ಥ ಮಾಡಿಕೊಂಡರೋ ತಿಳಿಯದು. ಇದರ ಉದ್ದೇಶವಾದರೂ ಇಷ್ಟೆ—ಹಾಗೆ ಅಧಿವೇಶನ ನಡೆಯುತ್ತಿರುವಾಗ ಅದರ ಕಾರ್ಯಕಲಾಪ ಗಳಿಗೆ ತೊಂದರೆಯಾಗಬಾರದೆಂಬ ಒಂದು ಘನೋದ್ದೇಶ ದಿಂದ ಮಾನ್ಯ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂ ರವರು ಇದನ್ನು ಸಭೆಯ ಮುಂದೆ ಮಂಡಿಸಿದ್ದಾರೆ.

ಮತ್ತೊಂದು ಅಂಶವೇನೆಂದರೆ —ಈ ಮಾನ್ಯ ಸಭೆ ನಮ್ಮ ಮೈಸೂರು ಸಂಸ್ಥಾನದ ಜನರ ಆಗು ಹೋಗು ಗಳನ್ನು ನಿರ್ಧರಿಸತಕ್ಕಂಥದ್ದಾಗಿದೆ. ಇಂಥಾ ಒಂದು ಮಾನ್ಯ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಆತಂಕ ಗಳು ಬಾರದಂತೆ ಕಡೆಗಟ್ಟತಕ್ಕದ್ದು ಪ್ರತಿಯೊಬ್ಬ ಈ ಸಭೆಯ ಮಾನ್ಯ ಸದಸ್ಯರ ಕರ್ತವ್ಯವಾಗಿದೆ. ಆದರೆ ಶ್ರೀ ಹುಚ್ಚೇಗೌಡರು ವಾದ ಮಾಡುತ್ತಾ ಇಷ್ಟು ವರ್ಷಗಳವರೆಗೂ, ಅಂಥ ಗಲಾಟೆ ವಗೈರೆಗಳ್ಯಾವುವೂ ಆಗಿರುವುದಿಲ್ಲ, ಆದುದರಿಂದ ಈಗ ಇಂಥಾ ಕಾನೂನು ಒಂದನ್ನು ತರತಕ್ಕ ಅಗತ್ಯವಾದರೂ ಏನಿದೆಯೆಂಬು ದಾಗಿ ತಿಳಿಸಿದರು. ಹಿಂದೆ ಈ ರೀತಿ ನಡೆದಿಲ್ಲ, ಆದ್ದ ರಿಂದ ಮುಂದೆ ಇಂಥಾ ಕಾನೂನಿಗೆ ಅವಕಾಶವಿಲ್ಲವೆಂದು ಹೇಳುವುದರ ಅರ್ಥ ನನಗೆ ತಿಳಿಯದಾಗಿದೆ. ದೇಶದ ಹಿತದೃಷ್ಟಿಯಿಂದ ಕೆಲವು ಕಾನೂನುಗಳನ್ನು ಮಾಡಲೇ ಬೇಕಾಗಿದೆ. ಇಂಥ ಕೆಲವು ಕಾನೂನುಗಳಿಂದ ದೇಶದ ಬಹು ಭಾಗದ ಜನರಿಗೆ ಉಪಕಾರವಾಗಬಹುದು. ಆಥವಾ ಅಲ್ಪಸ್ವಲ್ಪ ಜನರಿಗೆ ತೊಂದರೆ ಆದರೂ ಆಗ ಬಹುದು. ಆ ರೀತಿ ತೊಂದರೆಗೊಳಗಾಗಬಹುದಾದ ಜನರು ಅಂಥ ಕಾನೂನನ್ನು ತಡೆಗಟ್ಟಲು ಪ್ರದರ್ಶನ ವಗೈರೆ ಗಲಾಟೆ ಮಾಡಲು ಪ್ರಯತ್ನಿಸಬಹುದು. ತೊಂದರೆ ಮಾಡಲು ಇಷ್ಟೇ ಜನರಿರಬೇಕೆಂಬ ನಿಯಮ ವೇನೂ ಇಲ್ಲ. ದುರದ್ದೇಶದಿಂದ ಕೂಡಿದ ಅಲ್ಪಸ್ವಲ್ಪ ಜನರಿದ್ದರೂ ಈ ಸಭೆಯ ಕಾರ್ಯಕಲಾಪಗಳಿಗೆ ತೊಂದರೆ ಯಾಗಬಹುದು. ಇಂಥಾ ಸನ್ನಿವೇಶಗಳು ಇಲ್ಲಿಯ ತನಕ ಆಗದೆ ಇರಬಹುದು. ಆದರೆ ಮುಂದಕ್ಕೆ ಆಗು ವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇಂಥಾ ಸಂದರ್ಭಗಳು ಮುಂದೆ ಉಂಟಾಗಬಹುದು.

ಎರಡನೆಯದಾಗಿ ಶ್ರೀ, ಜೋಯಿಸರು ಹೇಳಿದ ಹಾಗೆ 50ಕ್ಕೆ ಒಬ್ಬರು ಕಡಿಮೆಯಾಗಿ 49 ಜನರು ಬಂದು ಗಲಾಟೆ ಮಾಡಿದರೂ ಈ ಮಸೂದೆಯಲ್ಲಿ ಯಾವ ಪ್ರತಿ ಬಂಧಕವೂ ಇಲ್ಲ. ಗಲಾಟೆ ಮಾಡುವುದಕ್ಕೆ, ವಿರೋಧ ಭಾವನೆ ಸೂಚಿಸುವುದಕ್ಕೆ, ಈ ಸಭೆಯ ಕಾರ್ಯಕಲಾಪ ಗಳಿಗೆ ಕುಂದು ತರುವುದಕ್ಕೆ ದುರುದ್ದೇಶವಿದ್ದರೆ 30 ಜನರು ಸಾಕು ಅಥವಾ ಹತ್ತು ಜನರಾದರೂ ಸಾಕು. ಆದ್ದರಿಂದ ಸಂಖ್ಯೆಯನ್ನು 50 ಕ್ಕೆ ನಿಗದಿ ಮಾಡುವಾಗ ಸರ್ಕಾರದವರು ಔದಾರ್ಯ ತೋರಿಸಿದ್ದಾರೆಂದು ಹೇಳ

ಬೇಕಾಗಿದೆ. ನಂಖ್ಯೆಯನ್ನೂ ಕಡಿಮೆ ಮಾಡಬಹುದಾಗಿತ್ತು. ಈಗಾಗಲೇ ಇಂಥ ಒಂದು ಪದ್ಧತಿ ಎಲ್ಲಾ ಕಡೆಯೂ ಇದೆ. ಉದಾಹರಣೆಗೆ ಒಂದು ಮದುವೆ ಉತ್ಸವವಾಗಬೇಕಾದರೆ ತಾಲ್ಲೂಕು ಕಚೇರಿ, ಪೋಲೀಸ್ ಸ್ಟೇಷನ್‌ಗಳ ಮುಂದೆ ಅಥವಾ ಹಿಂದೆ ಕೊಂಚ ದೂರ ಶಬ್ದ ಮಾಡುವುದಿಲ್ಲ. ಇದರ ಉದ್ದೇಶ ಒಳಗೆ ಕೆಲಸ ಮಾಡುವವರಿಗೆ, ಸರ್ಕಾರಿ ಕೆಲಸಕ್ಕೆ, ದೇಶದ ಕೆಲಸಕ್ಕೆ ತೊಂದರೆ ಆಗಬಾರದು ಎಂಬುದು.

ಮಾನ್ಯ ಜನಾಬ್ ಹನೀಫ್‌ರವರು ಮಾಡಿದ ವಾದವು ಆಶ್ಚರ್ಯವನ್ನುಂಟುಮಾಡಿದೆ! ದೇವರ ಪ್ರಾರ್ಥನೆಗೆ ಸೇರುವಾಗ ಗಲಾಟೆ ಮಾಡಕೂಡದೆಂಬ ಉದ್ದೇಶದಿಂದ ಮಸೀದಿಯ ಮುಂದೆ ವಾದ್ಯ ಬಾರಿಸಬಾರದೆಂದು ಬೇಕಾದಷ್ಟು ವ್ಯಾಜ್ಯವಾಗಿ ಹೈಕೋರ್ಟ್‌ನವರೆಗೂ ಹೋಗಿರುವ ಉದಾಹರಣೆಗಳಿವೆ. ಅದರ ಉದ್ದೇಶವಾದರೂ ಘನವಾದದ್ದೇ ಆಗಿದೆ. ಸಭೆ ಸೇರುವಾಗ ಬೇರೆ ದುರುದ್ದೇಶದಿಂದ ಇಲ್ಲದ ಗಲಾಟೆಗೆ ಅವಕಾಶವಿರಬಾರದು ಎಂಬ ಉದ್ದೇಶದಿಂದಲೇ ಈ ಬಗೆಯ ಹತೋಟಿ ಮಾಡಿದೆ. ಆ ರೀತಿಯಾಗಿ ತಾಲ್ಲೂಕು ಕಚೇರಿಯ ಮುಂದೆ, ಮಸೀದಿಯ ಮುಂದೆ, ಗಲಾಟೆ ಮಾಡಕೂಡದು, ಮೆರವಣಿಗೆ ಮಾಡುವಾಗ ವಾದ್ಯವನ್ನು ಬಾರಿಸಬಾರದು ಎಂದು ಅಡ್ಡಿ ಆತಂಕವಿರುವಾಗ ದೇಶದ ಪೂರ್ಣ ಜವಾಬ್ದಾರಿ ಹೊತ್ತಿರುವ ಈ ಸಭೆ ನಡೆಯುವಾಗ ಅಂಥ ಸ್ಥಳಕ್ಕೆ ಕೇವಲ 3–4 ಫರ್ಲಾಂಗ್ ಆಚೆಯವರೆಗೆ ಗಲಭೆ ಮಾಡುವುದಕ್ಕೆ ಅವಕಾಶವಿರಬಾರದು ಎಂದು ಹೇಳಿದರೆ, ಅವರ ಸದುದ್ದೇಶವನ್ನು ಗ್ರಹಿಸದೆ ಅದನ್ನೇ ದೊಡ್ಡದು ಮಾಡಿ ಆಜನ್ಮ ಸಿದ್ಧವಾದ ಹಕ್ಕು ಹೋಗುತ್ತದೆ, ಅದು ದಬ್ಬಾಳಿಕೆಯ ಸೂಚನೆ, ಎದರು ಪಕ್ಷದ ಸ್ವಾತಂತ್ರ್ಯವನ್ನು ಮೊಟಕು ಮಾಡುವ ನೀತಿ, ಇತ್ಯಾದಿಯಾಗಿ ದೊಡ್ಡ ಪದಗಳನ್ನು ಉಪಯೋಗಿಸಿ ಮಸೂದೆಯನ್ನು ವಿರೋಧಿಸುವುದನ್ನು ನೋಡಿದರೆ ಏನಾದರೂ ತಪ್ಪು ಹೊರಿಸಿ ಸರ್ಕಾರದ ನೀತಿಯನ್ನು ಖಂಡಿಸಬೇಕು ಎನ್ನುವ ಭಾವನೆ ನಮ್ಮ ಮಿತ್ರರಿಗೆ ಇರುವಂತೆ ತೋರುತ್ತದೆ. ಶ್ರೀ ಬಿ. ಹುಚ್ಚೇಗೌಡರ ಅಭಿಪ್ರಾಯ ಬಹುಶಃ ಹಾಗೆ ಇರಲಾರದು, ನೋಡಿದರೆ ಮಾತ್ರ ಹಾಗೆ ಕಾಣುತ್ತದೆ. ಕಾನೂನು ಮಾಡಿ ಸಭೆಯ ಗೌರವವನ್ನು ಹೆಚ್ಚಿಸುವುದಕ್ಕಿಂತ ತನ್ನ ಕಾರ್ಯದಿಂದ ಸಭೆ ಗೌರವಗಳಿಸಿಕೊಳ್ಳಬೇಕು ಎಂದು ಶ್ರೀ ಬಿ. ಹುಚ್ಚೇಗೌಡರು ಹೇಳಿರುವುದು ನ್ಯಾಯವಾಗಿ ಕಂಡರೂ, ಸಭೆಯ ಗೌರವವನ್ನು ಕಾಪಾಡುವುದರ ಜೊತೆಗೆ ಕೆಲಸ ತೊಂದರೆಯಿಲ್ಲದೆ ನಡೆಯಲು ಎಂಬ ಘನೋದ್ದೇಶದಿಂದ ಈ ಕಾನೂನನ್ನು ಮಾಡಬೇಕೆಂದು ಉದ್ದೇಶಿಸಿದೆ. ನಾನು ಮೊದಲೇ ಹೇಳಿದ ಹಾಗೆ ಈ ಸಭೆ ಮುಂದೆ ಮಾಡಬಹುದಾದ ಕೆಲವು ಕಾನೂನುಗಳಿಂದ ಅಲ್ಪ ಸ್ವಲ್ಪ ಜನರಿಗೆ ತೊಂದರೆಯಾಗುವ ಸಂಭವವಿದೆ. ಆಗ ಯಾರೂ ಬಂದು ಗಲಾಟೆ ಮಾಡಲು ಅವಕಾಶವಿರಬಾರದು.

ಇನ್ನೊಂದು ವಿಚಾರ. ಡೆಲ್ಲಿಯಲ್ಲಿ ಪಾರ್ಲಮೆಂಟ್ ನಡೆಯುವಾಗ ಮಾತ್ರವಲ್ಲದೆ ಉಳಿದ ಕಾಲದಲ್ಲೂ ಸೆಕ್ರೆಟೇರಿಯಟ್‌ಗೆ ಹೋಗಬೇಕಾದರೂ ಟಿಕೆಟ್ ಪಡೆಯಬೇಕು. ಮೈಸೂರು ದೇಶದ ಪ್ರತಿನಿಧಿಗಳು ಪ್ರತಿಯೊಬ್ಬರೂ ಪಾರ್ಲಮೆಂಟ್‌ಗೆ ಹೋಗುವುದಕ್ಕೆ ಮತ್ತು ಸೆಕ್ರೆಟೇರಿಯಟ್ಟಿನ ಆವರಣಕ್ಕೆ ಹೋಗುವುದಕ್ಕೆ ಡೆಲ್ಲಿಯಲ್ಲಿ ಪಾಸ್ ಪಡೆಯಬೇಕು. ಸಭೆಯ ಘನತೆ ಗೌರವ ಗಳಿಗೇ ಅಲ್ಲದೆ ಕೆಲಸ ಮಾಡುವ ಸದಸ್ಯರಿಗೆ ಅಥವಾ ಅಧಿಕಾರ ವರ್ಗದವರಿಗೆ ತೊಂದರೆಯಾಗಬಾರದು, ಅವರ ಗಮನವನ್ನು ಬೇರೆಯ ಕಡೆಗೆ ಸೆಳೆಯಬಾರದು ಎಂಬುದೇ ಈ ರೀತಿ ನಿರ್ಬಂಧ ಮಾಡುವುದರ ಒಂದು ಉದ್ದೇಶ. ಅದೇ ನಮ್ಮ ಸಂಸ್ಥಾನದಲ್ಲಿ ಸೆಕ್ರೆಟೇರಿಯೆಟ್ಟಿನಲ್ಲಿ ಅನೇಕರು ಛತ್ರಕ್ಕೆ ಬಂದ ಹಾಗೆ ಬರುತ್ತಾರೆ. ರಾತ್ರಿ ಒಂಭತ್ತು ಗಂಟೆಯಾದರೂ ಮಂತ್ರಿಗಳ ಛೇಂಬರ್‌ಗಳ ಮುಂದೆ ಜನ ಕಾದಿರುತ್ತಾರೆ. ಅಹವಾಲು ಹೇಳಿಕೊಳ್ಳಲು ಇಲ್ಲಿ ಯಾರಿಗೂ ಯಾವಾಗಲೂ ಅಡ್ಡಿ ಇಲ್ಲ. ಆದ್ದರಿಂದ ಸಭೆ ನಡೆಯುವಾಗ ಸಭಾ ಕಾರ್ಯಕ್ಕೆ ತೊಂದರೆಯಾಗಬಾರದು, ಶಾಂತ ರೀತಿಯಿಂದ ಸಭೆ ನಡೆಯಬೇಕು ಎಂಬ ಉದ್ದೇಶದಿಂದ ಮಾತ್ರ ಈ ಮಸೂದೆಯನ್ನು ತಂದಿದೆ. ಅಷ್ಟು ಹೊರತು ಪ್ರಾರ್ಥನೆ ಮಾಡಕೂಡದು, ಅರಿಕೆ ಮಾಡಕೂಡದು, ಯಾರನ್ನಾದರೂ ಮಟ್ಟಹಾಕಬೇಕು ಎಂಬ ಯಾವ ದುರುದ್ದೇಶವೂ ಇಲ್ಲ. ಶ್ರೀ ಬಿ. ಹುಚ್ಚೇಗೌಡರು ಹೇಳಿದ ಅಭಿಪ್ರಾಯ ಸಾಧುವಲ್ಲ ಆದ್ದರಿಂದ ಅವರ ವಿರೋಧಾಭಿಪ್ರಾಯವನ್ನು ವಿರೋಧಿಸಿ ಈ ಮಸೂದೆಗೆ ಸರ್ವರೂ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri H. SIDDAVEERAPPA (Chitaldrug District—General).—Sir, I rise to support this measure. It is a welcome measure for the simple reason that this House must have a calm atmosphere for deliberating on the several important measures that come before it. Sri B. Huche Gowda referred to the fact that no occasion has arisen. He seems to have forgotten that after the introduction of the Constitution of India this House has been assigned certain well defined duties to discharge which a very calm atmosphere is required Perhaps there was no occasion for any controversial measure to come before the House. But hereafter if there is any controversial measure which might affect any particular section of the population, for example, the Tenancy Bill, Zamindari Abolition Bill, and some of the social measures, it may so happen that the parties or sections of the population interested, may cause disturbance and try to obstruct the deliberations of this House. Hon'ble Member Sri H. K. Veeranna Gowda stated just now the procedure adopted at New Delhi Secretariat regarding the admission of visitors, etc., In spite of it when a highly controversial Bill like the Hindu Code Bill was on the anvil, the services of the mounted Police had to be requisitioned for maintaining peace and order within the precincts of the Parliament. Such being the case, it may be necessary here to enable us to go on with our deliberations in a calm atmosphere.

(SRI H. SIDDAVEERAPPA.)

There is another point also to be considered. That is, the time and cost of running this House will have to be taken into consideration. The valuable time of the House will have also to be taken due note of. If any disturbance occurs, it may not be possible to transact any serious business at all. Of course Janab Hanief asked how else it would be possible for anybody to bring any particular point before the Legislature. Of course demonstrations by themselves are not going to solve any problem. If this House passes any measure which is not liked by the majority of the population, there is the ballot box which decides the fate of the House, and Janab Hanief knows very well about this.

There is also one other point which has got to be considered in this connection. While passing this measure, I would like to place before the Hon'ble Law Minister that this measure refers only to the Legislative Assembly and after the general elections we are going to have the Upper House also—an equally important House. I find that this measure does not refer to the Upper House at all. I would therefore request the Hon'ble Minister in charge of this Bill to make suitable provision with regard to this point.

I would also like him to enlighten me as to the necessity for the proviso. The Bill as it stands is a very wholesome measure. After all, if less than 50 persons want to make any representations, they are at perfect liberty to do so, and as a matter of fact this House is given sufficient opportunities in its rules with regard to hearing petitions and other matters. Taking all these facts into consideration, I feel that there is no substance in the criticism that has been levelled and the Bill requires to be passed.

Janab J. MOHAMED SHARIFF (Mysore *cum* Mandya *cum* Hassan—Muslim).— Mr. Speaker, I am sorry that such a simple measure has raised a lot of controversy. I for one think that the reasons given by my friend the Hon'ble Minister for Law are not very convincing. My Hon'ble friend Sri Veeranna Gowda may not misunderstand me. I am actuated by nothing but sincere motive in opposing this Bill. The main reason given by the Hon'ble Minister is that the quietude of the House must be maintained, that the prestige of the House should not be affected. There may be several occasions, now as well as in the future, when unsocial elements might come and disturb the quietude of the House but that can be avoided by the Police. The Police have been armed with sufficiently large powers. If they scent any danger, if they feel that the tranquillity is going to be affected, they are there to prevent it. Apart from that, as a matter of fact, these four years, that is, after the grant of Responsible Government, several meetings were held and we had had no occasion when such a disturbance was apprehended or took place. About three years ago some students came and entered the portico of the Secretariat and created some hubub. Barring that event, we have been having an even course so far as the Assembly session is concerned. When there is no necessity, I do not know why this Bill is brought before us and we are asked to pass it into law. My Hon'ble friend just now referred to one instance. It seems that only recently when the Hindu Code Bill was being mooted before the Central Assembly, many ladies and persons who were opposed to it gathered together and demonstrated against it. But such demonstrations are the order of the day. In France and other places we have been reading of such reports every day. In any case, of there is no necessity at all for such a Bill, when we have no bitter experience and when demonstration is the order of the day, when such rights have been conceded to us. Suppose the Rajpramukh or any other person is invited to open the sessions should not those persons who are aggrieved demonstrate? But you may fix the distance beyond which the people can demonstrate. When the Police have been armed with efficient powers,

it seems to me that this Bill is unnecessary and uncalled for. I am opposing the Bill not with any other idea; I sincerely feel that it is not a very desirable piece of legislation.

The Hon'ble Sri K. T. BHASHYAM—It is a simple measure. Shall I reply to the points raised?

(SRI S. RANGARAMIAH rose).

The Hon'ble Sri K.T. BHASHYAM.—Does the Hon'ble Member want to speak?

Sri S. RANGARAMIAH (Mysore District—General).—Yes.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಕಾನೂನು ಇಷ್ಟು ಚರ್ಚೆಗೆ ಬರುತ್ತದೆ ಎಂದು ತಿಳಿದಿರಲಿಲ್ಲ. ಮತ್ತು ಸೂಚಕರೂ ಸಹ, ಇದು ಸಣ್ಣ ಮಸೂದೆ, ಹೆಚ್ಚು ಚರ್ಚೆ ಏಕೆ ಜವಾಬು ಕೊಡುತ್ತೇನೆ ಎಂದು ಹೇಳಿದರು. ಆದರೆ ನಮ್ಮ ಮಾನ್ಯ ಮಿತ್ರರು ಮನಸ್ಸನ್ನು ಸ್ವಲ್ಪ ಅಲ್ಲ ಕಲ್ಲೋಲ ಮಾಡುವಹಾಗೆ ಅಭಿಪ್ರಾಯ ಸೂಚಿಸಿದ್ದಾರೆ. ಒಬ್ಬರು ಸದಸ್ಯರು ಇಂಥಾ ಕಾಲದಲ್ಲೂ ಒಂದು ಬಹಳ ಮುಖ್ಯವಾದ ಅಭಿಪ್ರಾಯವನ್ನು ಸೂಚಿಸಲು ಅಥವಾ ಅವರಿಗೆ ಆಗಿರತಕ್ಕ ಒಂದು ವೇದನೆಯನ್ನು ಪರಿಹಾರ ಮಾಡಿಕೊಳ್ಳಲು ಸಭೆಯನ್ನು ಕರೆದರೆ ಏನು ಮಹಾ, ಅದಕ್ಕೆ ಅವಕಾಶ ಕೊಡದೇ ಇರುವುದು ಹೇಗೆ ವಾದು ಎಂದು ಹೇಳಿದರು. ಶ್ರೀ ಬಿ. ಹುಚ್ಚೇಗೌಡರು, ಎದುರು ಪಕ್ಷವನ್ನು ತುಳಿಯುವುದಕ್ಕೆ ಮತ್ತು ದಬ್ಬಾಳಿಕೆಯಿಂದ ಆಳುವುದಕ್ಕೆ ಹೀಗೆ ಮಾಡುತ್ತಾ ಇದ್ದಾರೆ ಎಂದು ಹೇಳಿದರು. ಅಷ್ಟು ಕಠಿಣವಾದ ಶಬ್ದ ಏಕೆ ಉಪಯೋಗಿಸಿದರೋ ಗೊತ್ತಿಲ್ಲ. ಇದನ್ನು ತಂದಿರುವ ಕಾರಣ ಇಷ್ಟೆ. ಕಾನ್ಸ್ಟಿಟ್ಯೂಷನ್‌ನಲ್ಲಿ ಏನಿದೆ ಎಂದರೆ, ಸೆಕ್ಷನ್ 19 (1) ರ ಪ್ರಕಾರ:

"All citizens shall have the right—
to freedom of speech and expression,
to assemble peacefully and without arms,
to form associations and unions, or
to move freely throughout the territory of India. . . . . ."

ಈ ರೀತಿ ಕಾನೂನು ಪ್ರಕಾರ ನಮಗೆ ಒಂದು ಮೂಲಭೂತವಾದ ಹಕ್ಕನ್ನು ಕೊಟ್ಟಿದೆ. ಆ ಮೂಲ ಭೂತವಾದ ಹಕ್ಕನ್ನು ಯಾವ ರೀತಿ ಕುಂಠಿತ ಮಾಡ ಬಹುದು ಎಂಬುದನ್ನು ಸಹ ಸೆಕ್ಷನ್ 19 (2) ರಲ್ಲಿ ಹೇಳಿದೆ. ಆಯಾಯ ಸಂದರ್ಭಕ್ಕೆ ತಕ್ಕಂತೆ ರೆಜಿಸ್ಲೇಟೀವ್ ಕೌನ್ಸಿಲ್‌ನವರು ಕಾನೂನು ಮಾಡಬಹುದು. ಈಗ ಈ ಕಾನೂನನ್ನು ತಂದಿರತಕ್ಕದ್ದು ಒಂದು ಮುಂಜಾಗ್ರತೆಯ ಕ್ರಮ. ಇದುವರೆಗೂ ಯಾರೂ ಏನೂ ಮಾಡಿಲ್ಲವೆಂದು ಅಥವಾ ಅಲ್ಲಕಲ್ಲೋಲವಾಗಿಲ್ಲವೆಂದು ಅಥವಾ ಆಕಾಶ ಕಳಚಿಲ್ಲವೆಂದು ಹೇಳಿ ನುಮ್ಮನೆ ಕೈಕಟ್ಟಿಕೊಂಡು ಕುಳಿತಿರುವುದು ಅಲ್ಲ. ಅಂಥಾದ್ದು ಆಗುವ ಕಾಲದಲ್ಲಿ ಎಂದರೆ ಹಿಂದೂ ಮಸೂದಾ ಕಾನೂನು ಬರುವುದಿದೆ, ನಾಳೆ ಜಹಗೀರಿ ಮತ್ತು ಇನಾಂ ಗ್ರಾಮಗಳನ್ನು ತೆಗೆದುಹಾಕಬೇಕೆಂಬ ಮಸೂದೆ ಬರುತ್ತದೆ. ಆಗ ಆ ಮಸೂದೆಗಳು ಜಾರಿಗೆ ತರ ಕೂಡದು ಎಂದು ಅನೇಕರು ಗೊಂದಲ ಮಾಡಬಹುದು. ಅಂಥಾ ಸಮಯದಲ್ಲಿ ಕಣ್ಣು ಕಣ್ಣು ಬಿಡುವುದಕ್ಕಾಗುವುದಿಲ್ಲ. ಅದನ್ನು ತಪ್ಪಿಸುವುದಕ್ಕೆ ಮತ್ತು ಚಳುವಳಿ ಮಾಡುವವರನ್ನು ಹದ್ದುಬಸ್ತಿನಲ್ಲಡಿಟ್ಟುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆಯೇ ಏನಹ ಮತ್ತೆ ಬೇರೆ ಅಲ್ಲ. ಆದ್ದರಿಂದ ಆ ಮೂಲಭೂತವಾದ ಹಕ್ಕನ್ನು ತಕ್ಕ ಮಟ್ಟಿಗೆ ಹತೋಟಿಯಲ್ಲಿಡಬೇಕಾದರೆ ಇದು ಅತ್ಯವಶ್ಯಕ. ಮತ್ತು ಇದರಲ್ಲಿ ಏನು ಹೇಳಿದೆ ಎಂದರೆ ಅರ್ಧ ಮೈಲಿ ಒಳಗೆ ಸಭೆ ನಡೆಸಕೂಡದು. ಶಾಸನ ವಿಧಾಯಕ ಸಭೆ ನಡೆಯುವಾಗ 50 ಜನಕ್ಕೆ ಮೇಲ್ಪಟ್ಟು ಜನಗಳು ಸೇರಿ ಅರ್ಜಿ ಭರೆಯುವುದಾಗಲೀ ಅಥವಾ ಇತರ ಯಾವ ಕಾರ್ಯಕ್ರಮವನ್ನೇ ಆಗಲೀ ಬೇರೆ ಎಲ್ಲಾ ಸ್ಥಳವನ್ನು ಬಿಟ್ಟು ಸಭೆ ನಡೆಯುವ ಸ್ಥಳದಲ್ಲೇ ಮಾಡಬೇಕೆಂದರೆ ಅವರ ಉದ್ದೇಶ ಏನು ಎಂಬುದು ತಾನೇ ಗೊತ್ತಾಗುತ್ತದೆ. ಅವರ ಪಾಡಿಗೆ ಅವರು ಮಾಡಿಕೊಳ್ಳುತ್ತಾರೆ. ಶಾಂತ ವಾತಾವರಣದಲ್ಲಿ ನಾವು ಇಲ್ಲಿ ನಮ್ಮ ಕಾರ್ಯ ಕಲಾಪಗಳನ್ನು ನಡೆಸುವುದಕ್ಕೆ ಆಗುವುದಿಲ್ಲವೇ ಎಂದು ಹೇಳಿದರು. ನಾವು ಇಲ್ಲಿ ಚರ್ಚೆ ನಡೆಸುತ್ತಿರುವಾಗ ಹೊರಗಡೆ 100 ಜನ ಬಂದು ಕೂಗುತ್ತಾ ಇರುತ್ತಾರೆ. ಅವರನ್ನು ತಡೆಯುವುದಕ್ಕೆ ಪೋಲಿಸಿನವರು ಇದ್ದರೂ ಸಹ ಅವರ ಗಲಾಟೆಯನ್ನು ಶ್ರೀ ಬಿ. ಹುಚ್ಚೇಗೌಡರಂಥ ಅರಿಷಡ್ವರ್ಗಗಳನ್ನು ನಿಗ್ರಹಿಸಿದವರು ಅಂಥಾ ಗಲಾಟೆಯನ್ನು ತಡೆದುಕೊಳ್ಳಬಹುದೇ ಹೊರತು ನನ್ನಂಥವನ ಕೈಯಲ್ಲಿ ಆಗುವುದಿಲ್ಲ. ಪೋಲಿಸಿನವರು ಇದ್ದುಕೊಂಡೂ ಅವರು ಗಲಾಟೆ ಮಾಡುತ್ತಿರುವಾಗ ಶಾಂತ ವಾತಾವರಣ ಎಲ್ಲಿ ಉಳಿಯುತ್ತದೆ? ಇಲ್ಲಿ ನಿಷ್ಪಕ್ಷಪಾತವಾದ ಒಂದು ತೀರ್ಮಾನಕ್ಕೆ ಬರಲು ಹೇಗೆ ಆಗುತ್ತದೆ? ಮಾನ್ಯ ಸಚಿವರು 50 ಜನಕ್ಕೆ ಅವಕಾಶ ಕೊಟ್ಟಿದ್ದಾರೆ. 50 ಜನ ಸೇರಿದರೆ ಎಷ್ಟೋ ಅನಾಹುತ ಮಾಡಬಹುದು. ಆದ್ದರಿಂದ 10 ಜನಕ್ಕೂ ಸಹ ಅವಕಾಶ ಕೊಡಬಾರದಾಗಿತ್ತು ಎಂದು ನನ್ನ ಸ್ವಂತ ಅಭಿಪ್ರಾಯ.

ಇದು ಬಹಳ ಮುಖ್ಯವಾದ ಕಾನೂನು. ಇದನ್ನು ಪ್ರಯೋಗ ಮಾಡಿ ಎದುರು ಪಕ್ಷವನ್ನು ತುಳಿಯುತ್ತಾರೆಂಬುದು ಸರಿಯಲ್ಲ. ನಾಳೆಯ ದಿನ ನಮ್ಮ ಸಹೋದರರನ್ನು ಅವರು ಭೀತಿಪಡಿಸುವ ಕಾಲದಲ್ಲಿ ಅವರಿಗೂ ಸ್ವಲ್ಪ ರಕ್ಷಣೆ ಕೊಡಬೇಕು ಎಂಬ ಉದ್ದೇಶದಿಂದ ತಂದಿದ್ದಾರೆಂದು ಹೇಳಿ ಈ ಮಸೂದೆಯನ್ನು ಅನುಮೋದಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಜನಾಬ್ ಮಹಮದ್ ಷರೀಫ್‌ರವರು ಈ ಮಸೂದೆಯನ್ನು ವಿರೋಧಿಸಿ ಮಾತನಾಡಿದ್ದು ಬಹಳ ಆಶ್ಚರ್ಯವನ್ನುಂಟುಮಾಡಿತು! ಪ್ರಜಾಪ್ರಭುತ್ವದಲ್ಲಿ ದುಷ್ಟ ಶಕ್ತಿಗಳಿಗೆ ಅಭಾವವಿಲ್ಲ, ದಿನೇ ದಿನೇ ಹೆಚ್ಚುತ್ತಾ ಪ್ರಬಲಿಸುತ್ತದೆ. ಅನೇಕ ಜನಗಳ ಮುಂದೆ ಇರತಕ್ಕ ಅನೇಕ ಸಮಸ್ಯೆಗಳ ಬಗ್ಗೆ ಮನಸ್ವೀ ವ್ಯಾಖ್ಯಾನ ಮಾಡತಕ್ಕವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಇದೆ. (ಸಭೆಯಲ್ಲ ನಗು!) ಹೀಗಿರುವಾಗ ಮಹತ್ತರವಾದ ವಿಚಾರಗಳನ್ನು ಚರ್ಚೆಮಾಡಿ ಮಹತ್ತರವಾದ ತೀರ್ಮಾನಗಳನ್ನು ಮಾಡತಕ್ಕ ಈ ಸಭೆಯ ಮುಂದೆ ಜನಗಳು ಬಂದು ಮನಸ್ವೀ ವ್ಯಾಖ್ಯಾನಮಾಡುತ್ತಾ ಇದ್ದರೆ, ಇಲ್ಲ ಕುಳಿತುಕೊಂಡು ಶ್ರೀ ಬಿ. ಹುಚ್ಚೇಗೌಡರು-ಯಾವ ರೀತಿ ಕೆಲಸ ಮಾಡಬೇಕೋ ಭಗವಂತನೇ ಹೇಳಬೇಕು! ಈಗಿರತಕ್ಕ ಕಾನೂನುಗಳಿಂದಲೇ ತಡೆಯಬಹುದು ಎಂದು ಅವರು ಹೇಳಿದರು. ಗಲಾಟೆ ಮಾಡಿದರೆ ಆಮೇಲೆ ಶಿಕ್ಷೆ ಮಾಡುವುದಕ್ಕೆ ಈಗಿರತಕ್ಕ ಕಾನೂನು ಪ್ರಕಾರ ಅವಕಾಶವಿದೆಯೇ ಏನಹ ಆದಕ್ಕೆ ಮೊದಲೇ ತಡೆಗಟ್ಟುವುದಕ್ಕೆ ಅಷ್ಟಾಗಿ ಅವಕಾಶವಿಲ್ಲ. ಈಗ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಸ್ವಲ್ಪ ದಿನಗಳ

(ಶ್ರೀ ಎಚ್. ಎಂ. ಚೆನ್ನಬಸಪ್ಪನವರು.)

ಹಿಂದೆ ವಿದ್ಯಾರ್ಥಿಗಳ ಸಭೆ ಸೇರಿ, ಇಲ್ಲಿ ಒಂದು ಗೊಂದಲವೆದ್ದಕಾಲದಲ್ಲಿ ಇಬ್ಬರು, ಮೂರು ಜನ ಮಂತ್ರಿಗಳು ಹೋಗಿ ಅವರನ್ನುದ್ದೇಶಿಸಿ ಭಾಷಣ ಮಾಡಬೇಕಾಗಿ ಬಂತು. ಅದೇನು ಗೊಂದಲ ಎಂದು ಸದಸ್ಯರೆಲ್ಲರೂ ಎದ್ದುಹೋಗಿದ್ದರು, ಪತ್ರಿಕಾಪ್ರತಿನಿಧಿಗಳು ಹೋಗಿದ್ದರು, ಜನಗಳ ದೊಡ್ಡ ಗುಂಪು ಸೇರಿತ್ತು. ಆ ರೀತಿ ಆಗಿ ನಮ್ಮ ಸಭೆಯ ಕೆಲಸ ಕಾರ್ಯ ಸುಸೂತ್ರವಾಗಿ ನಡೆಯುತ್ತಿದೆ, ಮುಖ್ಯವಾದ ವಿಷಯಗಳು ಚರ್ಚೆಗೆ ಬಂದಾಗ ಅದರಲ್ಲಿ ಭಾಗವಹಿಸಲಿಕ್ಕೆ ಅವಕಾಶವಿಲ್ಲದ ಹಾಗಾಗುವ ಸಂದರ್ಭ ಬರುತ್ತದೆ. ಈಗ ಇರುವುದನ್ನು ಸಹ ನೋಡಿ ನನಗೆ ಆಶ್ಚರ್ಯವಾಯಿತು. 50 ಜನಕ್ಕೆ ಅವಕಾಶ ಕೊಟ್ಟಿದ್ದಾರೆ. ಯಾರಾದರೂ ನಮ್ಮನೆ ಸಭೆಯ ಕಾರ್ಯಕಲಾಪಗಳಿಗೆ ಆತಂಕ ತರುವ ಉದ್ದೇಶದಿಂದ ಗೊಂದಲ ಎಬ್ಬಿಸಬೇಕೆಂದರೆ ಒಬ್ಬನೇ ಆದರೂ ಸಹಸಾಕು; 50 ಜನ ಸೇರಬೇಕಾಗಿಲ್ಲ. ಆಷ್ಟು ಜನಕ್ಕೆ ಅವಕಾಶ ಕೊಟ್ಟಿರುವುದನ್ನು ನೋಡಿದರೆ ಅವರ ಉದಾರತೆಯನ್ನು ತೋರಿಸುತ್ತದೆಂದು ನನಗೆ ಅನ್ನಿಸುತ್ತದೆ.

ಆದ್ದರಿಂದ ನಾನು ಸಲಹೆಮಾಡುವುದು, ಈಗಲೂ ಸಾಧ್ಯವಾದರೆ ಒಂದು ತಿದ್ದುಪಡಿಯನ್ನು ತಂದು ಇದರಲ್ಲಿ ಇಷ್ಟು ಜನರ ಸಂಖ್ಯೆ ಎಂಬುದನ್ನು ಹೇಳುವುದನ್ನು ತಗೆದುಹಾಕಿದರೆ ಒಳ್ಳೆಯದು. ಅದು ಅನಾವಶ್ಯಕ. ಈ ಸಭೆಗೆ ಲೋಪ ಬರುವ ರೀತಿಯಲ್ಲಿ ಅಥವಾ ಶಾಂತ ವಾತಾವರಣವನ್ನು ಕಲಕತಕ್ಕ ರೀತಿಯಲ್ಲಿ ಯಾರಾದರೂ —ಅವರು ಒಬ್ಬರಾಗಲೀ, ಇಬ್ಬರಾಗಲೀ, 50 ಜನರಾಗಲೀ—ಅಂಥಾ ಒಂದು ಕೆಲಸ ಕಾರ್ಯವನ್ನು ಮಾಡುವುದಕ್ಕೆ ತೊಡಗಿದರೆ ಅಂಥಾದ್ದನ್ನು ಮೊದಲೇ ತಪ್ಪಿಸುವುದಕ್ಕೆ ತಕ್ಕ ಸಾಧನವನ್ನು ಏರ್ಪಾಡುಮಾಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಆದ್ದರಿಂದ ಇದನ್ನು ವಿರೋಧಿಸಿದಂಥ ಮಾನ್ಯ ಮಹನೀಯರು ಈ ಅಂಶಗಳನ್ನೆಲ್ಲಾ ಪರಿಶೀಲಿಸಿ, ಈಗಲಾದರೂ ಈ ಮಸೂದೆಗೆ ಒಪ್ಪಿ ಸಂಪೂರ್ಣ ಸಹಕಾರವನ್ನು ಕೊಡುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).— ಮಾನ್ಯ ಅಧ್ಯಕ್ಷರೇ, ಇಂಥಾ ಒಂದು ಕಾನೂನು ಬಹಳ ಹಿಂದೆಯೇ ಬಂದಿದ್ದರೆ ಇನ್ನೂ ಚೆನ್ನಾಗಿತ್ತೆಂದು ನಾನು ಭಾವಿಸುತ್ತೇನೆ. ಇಲ್ಲೇ ಹಿಂದೆ ಅನೇಕ ಸಂದರ್ಭಗಳಲ್ಲಿ ಇಂಥ ಪ್ರಸಂಗ ಬಂದಿದೆ. ಇದೇ ಸಭಾಂಗಣದ ಸಮೀಪದಲ್ಲಿ ಕೂಲಿಗಾರರು ಎರಡುಸಾರಿ, ವಿದ್ಯಾರ್ಥಿಗಳು ಎರಡುಸಾರಿ ಬಂದು ಗಲಭೆಯಾದ ಪ್ರಸಂಗ ಒದಗಿತು. ಅಂಥ ಸಂದರ್ಭದಲ್ಲಿ ಪೋಲೀಸಿನವರನ್ನು ಕರೆಯಸಿ ದೊಡ್ಡ ಗೊಂದಲಕ್ಕೆ ಅವಕಾಶ ಕೊಡುವುದಕ್ಕಿಂತ ಈ ರೀತಿ ಒಂದು ಕಾನೂನು ಮಾಡಿ ಸಭಾ ನಡವಳಿಕೆ ಸುಸೂತ್ರವಾಗಿ ನಡೆಯುವಂತೆ ಮಾಡುವುದು ಅತ್ಯಾವಶ್ಯಕವೆಂದು ಭಾವಿಸುತ್ತೇನೆ. ನನ್ನ ಮಾನ್ಯ ಮಿತ್ರರಾದ ಜನಾಬ್ ಷರೀಫ್‌ರವರು ಈ ಮಸೂದೆಯನ್ನು ವಿರೋಧಿಸಿದ್ದಂತೂ ನನಗೆ ಆಶ್ಚರ್ಯವನ್ನುಂಟುಮಾಡಿತು. ಪ್ರತಿಯೊಬ್ಬರಿಗೂ ಅವರವರ ಕುಂದು ಕೊರತೆಗಳನ್ನು ಹೇಳಿಕೊಳ್ಳುವುದಕ್ಕೆ ಕಾಲ ಬೇರೆ ಇದೆ, ಸಮಯ ಬೇರೆ ಇದೆ, ನನ್ನಿವೇಶ ಬೇರೆ ಇದೆ. ಆ ಕಾಲ, ನನ್ನಿವೇಶ, ಸಂದರ್ಭಗಳನ್ನು ನೋಡಿಕೊಂಡು ಕಾನೂನಿಗನುಸಾರವಾಗಿ ಅವರವರ ಕುಂದು ಕೊರತೆಗಳನ್ನು ಈ ಸಭೆಯ ಸದಸ್ಯರ ಗಮನಕ್ಕೆ ತರುವುದಕ್ಕಾಗಲೀ, ಸರ್ಕಾರದವರ ಗಮನಕ್ಕೆ ತರುವುದಕ್ಕಾಗಲೀ ಯಾವ ಅಡ್ಡಿ ಆತಂಕಗಳೂ ಇರುವುದಿಲ್ಲ. ಅಧ್ಯಕ್ಷರು ಅಪ್ಪಣೆ ಕೊಡಿಸಿದಹಾಗೆ ಪ್ರಜೆಗಳು ಅವರ ಕುಂದುಕೊರತೆಗಳನ್ನು ಈ ಸಭೆಗೂ ಕೂಡ ಅರ್ಜಿಯ ಮೂಲಕ ಹೇಳಿಕೊಳ್ಳಬಹುದು. ಇಲ್ಲದಿದ್ದರೆ ಈ ಸಭೆಯ ಸದಸ್ಯರ ನಿವಾಸಕ್ಕೆ ಹೋಗಿ ಅವರ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಬಹುದು. ಅದೂ ಆಗದಿದ್ದರೆ, ಮಾನ್ಯ ಶ್ರೀ ಬಿ. ಹುಚ್ಚೇಗೌಡರಂಥ ಸಭಾಸದಸ್ಯರು ಬೇರೆ ಎರ್ನಾಕುಲದಲ್ಲಿ ಒಂದು ಸಭೆ ನಡೆಯಿಸಿ ಯಾರು ಬೇಕಾದರೂ ಅಲ್ಲಿ ಬಂದು ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದೆಂದು ಮಾಡಬಹುದು. ಅದೊಂದೂ ಇಲ್ಲದೆ ಸುಮ್ಮನೆ 'ಓ' ಎಂದು ಕೂಗಿಕೊಂಡು ಅಸಭ್ಯ ರೀತಿಯಲ್ಲಿ ವರ್ತಿಸುತ್ತಾ, ಒಂದು ಕಲುಷಿತ ವಾತಾವರಣವನ್ನುಂಟುಮಾಡುವುದು ನನಗಂತೂ ಚೆನ್ನಾಗಿ ಕಾಣುವುದಿಲ್ಲ. ನಮ್ಮ ಮಾನ್ಯ ಮಿತ್ರರು ಈ ಮಸೂದೆಯನ್ನು ವಿರೋಧಿಸುತ್ತಾ, ಇದು ಈ ಸಭೆಯ ಘನತೆಗೆ, ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತದೆಂದು ಹೇಳಿದರು. ಮಾನ್ಯ ಶ್ರೀ ರಂಗರಾಮಯ್ಯನವರು ಹೇಳಿದಹಾಗೆ ಭಾರತ ರಾಜ್ಯಾಂಗ ಜಾರಿಗೆ ಬಂದ ತರುವಾಯ ಪ್ರತಿಯೊಬ್ಬ ಪ್ರಜೆಗೂ ಸಭೆ ಸೇರಲು, ಮಿಟಿಂಗ್ ನಡೆಸಲು, ಮೆರವಣಿಗೆ ನಡೆಸಲು ಹಕ್ಕಿದೆ. ಆ ಹಕ್ಕನ್ನು ಈಗಿರತಕ್ಕ ಕಾನೂನಿನ ಮೂಲಕ ಪ್ರತಿಬಂಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಈ ಮಸೂದೆ ಅತ್ಯಗತ್ಯವೆಂದು ನಾನು ಭಾವಿಸುತ್ತೇನೆ. ಇಷ್ಟು ಹೇಳಿ ನಾನು ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

The Hon'ble Sri K. T. BHASHYAM.— Hon'ble Members have already answered the few objections which have been raised by those who opposed this Bill and I can only categorically restate them. So far as Sri H. Siddaveerappa's suggestion is concerned, when the Legislative Council is constituted this can be amended suitably. It is not necessary for us to anticipate and therefore we confine it to the Legislative Assembly now.

Hon'ble Members who opposed it seem to be under the impression that we are totally preventing expression of all views opposed to the Government. But, they will find that this restriction is very narrow and very large scope is given for people to express themselves. After all what does this say? It is only on the day that the Assembly sits that this restriction will apply. On all other days not merely 50 but thousands of people may come and go. During the meeting of the Assembly they can gather in thousands half a mile away, we have no objection. Less than 50 even now can come and have their meeting. It seems, Sir, if at all, I have erred on the side of moderation.

Some of the Hon'ble Members felt that it ought to have been more severe.

Janab MAHMOOD SHARIFF.—If it is more tumultuous?

Sri S. RANGARAMIAH.—They may demonstrate before the Hon'ble Member's quarters.

Janab MAHMOOD SHARIFF.—I am sorry, why several gentlemen ridicule me!

The Hon'ble Sri K. T. BHASHYAM.—I will tell why we feel strange particularly about Janab Shariff; because of all the people in the world, I consider Janab Shariff to be a very God-fearing person.

Janab MAHMOOD SHARIFF.—I am grateful.

The Hon'ble Sri K. T. BHASHYAM.—That is why I am feeling strange because he attaches more attention to the undisturbed prayer. If one man's salvation is so important that his prayer should not be disturbed, here we are representing 90 lakhs of people and how much more should we be not disturbed? Then he said that the Police have got the power. It is always best not to allow the police every now and then to come into action. A healthy environment in which the Assembly should function is always good. This will for all time make it possible for the Assembly, whenever it sits, to deliberate and concentrate on its work undisturbed. This is a very healthy system that we are introducing and it is good. Even in the House of Commons they say, when the House of Commons sits, there shall be no procession within a certain distance. It is a very wholesome measure.

Janab Hanief said that every demonstration was a *bona fide* one. Not always. They may not mean any disrespect, but all the same, they cause disturbance as the practical result of their shouting. Is this the freedom that the Hon'ble Member has got in view? Cannot the freedom be exercised in a better manner? When the Assembly sits why should people come and hold meeting? That shows there is something more than the purpose of impressing the Assembly Members. If that is the way of impressing the Members, we say that that is not the way. There are many other ways and you can choose any of them and this particular way of disturbing the Assembly when it is sitting, we cannot allow.

Sri Huche Gowda said, "ಉದಾಹರಣೆ ಕೊಟ್ಟಿದ್ದಾರೆ." Sri H. M. Channabasappa has referred to it. We had disturbances here also and we thought of it then alone. After deep deliberation we have brought forward this Bill.

We have absolutely no idea of suppressing any opposition. There are many methods in which the Opposition can make itself felt. It is only in particular period of time, within particular distance and particular circumstances that we say 'there shall not be meetings or processions.'

Sir, it has been amply answered by many Hon'ble Members. I do not want to take further time of the House. I only submit Sir, that it is very innocuous, helpful and adds to the dignity of this House and therefore I commend it to the acceptance of the House.

Sri H. SIDDAVEERAPPA.—There is no need for the proviso.

Mr. SPEAKER.—The question is:

"That the Mysore Restriction of Meetings near the Legislative Assembly Bill, 1951, be taken into consideration."

The motion was adopted.

Mr. SPEAKER.—The Clauses will now be submitted to the House. Clause 2. The question is:

"That clause 2 stands part of the Bill."

The motion was adopted.

Clause 2 was added to the Bill.

Mr. SPEAKER.—Clause 1. The question is:

"That clause 1 stands part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is:—

"That the Title and the Preamble stand part of the Bill."

The motion was adopted.

The Title and the Preamble were added of the Bill.

Motion to pass.

The Hon'ble Sri K. T. BHASHYAM.— Sir, I beg to move.—

"That the Mysore Restriction of Meetings near the Legislative Assembly Bill, 1951, be passed.

Mr. SPEAKER.—The question is :

"That the Mysore Restriction of Meetings near the Legislative Assembly Bill, 1951, be passed."

The motion was adopted.

The Mysore Prohibition (Amendment) Bill, 1951.

Motion to consider.

***The Hon'ble Sri H. SIDDAIYA** (Minister for Revenue and Excise).— Sir, I beg to move ;

"That the Mysore Prohibition (Amendment) Bill, 1951, be taken into consideration."

While moving this Bill for the consideration of this House, I just wish to say a few words. Strictly and legally speaking there is no necessity for section 47 for the simple reason that even in more heinous offences when persons are summoned by police officer their statements are not reduced to writing. They are not recorded or signed by the person who makes the statement. But in cases of less offences where the prohibition cases are under investigation the persons who are summoned by the prohibition officer, under section 47 as it now stands, are required to make statement and it is also provided in the said section that these statements shall be recorded and the person who makes that statement shall be required to sign the statement. This process of obtaining the signatures of the parties making statement in the course of investigation is not contemplated or prescribed even in more heinous crimes such as murder, decoity, and other cases. Even in those cases the police officer when he examines the persons summoned by him, it will be an oral examination and no signatures are prescribed to be taken. With a view to have speedy disposal of prohibition cases and also to avoid the expense, among other things, it is necessary that the statements need not be recorded nor their signatures be taken. It is therefore proposed to delete the section. This Bill is felt to be necessary at this stage after experience. It may therefore be accepted by the House.

Mr. SPEAKER.—The question is :

"That the Mysore Prohibition (Amendment) Bill, 1951, be taken into consideration."

The motion was adopted.

Mr. SPEAKER.—The clauses will now be submitted to the House. Clause 2—there is an amendment to it.

Sri K. PUTTASWAMY (Mandya District—General).—Sir, I beg to move the following amendment to clause 2 of the Mysore Prohibition (Amendment) Bill, 1951 ;

For clause 2, substitute the following :

"In section 47 of the Mysore Prohibition Act, 1948, the words 'such answer shall be reduced to writing and shall be signed by such officer' shall be deleted."

Sir, Section 47 as it now stands reads as follows.—

"persons so summoned shall attend as required and shall answer all questions relating to such enquiry put to them by such officer. Such answer shall be reduced to writing and shall be signed by such officer.

The object of this amendment, as explained by the Hon'ble Minister, is to avoid the statement so made to be reduced into writing and signed by such officer. In section 47, the second sentence is proposed to be omitted. This amendment to section would serve the purpose. I therefore commend this amendment for the kind acceptance of this House as that would serve the purpose of this Amending Bill.

Mr. SPEAKER.—Amendment moved.—

For clause 2 substitute the following :

"in section 47 of the Mysore Prohibition Act, 1948, the words 'such answer shall be reduced to writing and shall be signed by such officer' shall be deleted."

Janab MAHOMED HANIEF (Bangalore—Muslim).—Sir, I want to know the exact reason for this amending Bill. Is speedy disposal of cases the only reason or is there any other reason ? As it is, there is provision for the witness's statement to be reduced to writing and also to be signed and